# LIBRARY & INFORMATION CENTRE

## GIT in NEWS

### Loka Darshan 05-04-2016

#### ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಒಂದು ದಿನದ ಕಾರ್ಯಾಗಾರ

ಬೆಳಗಾವಿ : ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರ ಸಹಯೋಗದೊಂದಿಗೆ ಒರುವ ದಿ. 6ರಂದು ಮುಂಜಾನೆ 10-30ಕ್ಕೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುವೆಂಪು ಸಭಾ ಭವನದಲ್ಲಿ 'Curriculum Design: Outcome based Education Model' ಎಂಬ ವಿಷಯದ ಕುರಿತು ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಾಗಾರದ ಅಧ್ಯಕ್ಷತೆಯನ್ನು ಕುಲಪತಿ ಪ್ರೊ. ಶಿವಾನಂದ ಹೊಸಮನಿ ಅವರು ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಜಿಐಟಿಯ ಪ್ರಾಂಶುಪಾಲ ಪ್ರೊ. ಎ.ಎಸ್.ದೇಶಪಾಂಡೆ ಅವರು ಆಗಮಿಸಲಿದ್ದಾರೆ. ಕುಲಸಚಿವರು (ಆಡಳಿತ) ಪ್ರೊ. ಎಸ್.ಎಲ್.ಬೆಳಗಲಿ, ಕುಲಸಚಿವರು (ಮೌಲ್ಯಮಾಪನ) ಪ್ರೊ. ರಂಗರಾಜ ವನದುರ್ಗ ಹಾಗೂ ಹಣಕಾಸು ಅಧಿಕಾರಿ ಪ್ರೊ. ಹೆಚ್. ವಾಯ್.ಕಾಂಬಳೆ ಇವರು ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಹುಬ್ಬಳ್ಳಿಯ ಕೆಎಲ್‌ಇ ತಂತ್ರಜ್ಞಾನ ವಿಶ್ವವಿದ್ಯಾಲಯ ನಿರ್ದೇಶಕ ಸಿಇಇಆರ್ ಡಾ. ಗೋಪಾಲಕೃಷ್ಣ ಜೋಶಿ ಅವರು ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಳ್ಳಲಿದ್ದಾರೆ. ಈ ಕಾರ್ಯಾಗಾರವು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಎಲ್ಲಾ ಸಂಯೋಜಿತ ಮಹಾವಿದ್ಯಾಲಯಗಳ ಭೌತಶಾಸ್ತ್ರ, ಗಣಕ ವಿಜ್ಞಾನ ಮತ್ತು ಗಣಿತಶಾಸ್ತ್ರ ವಿಷಯಗಳ ಪ್ರಾಧ್ಯಾಪಕರುಗಳಿಗೆ ಪಠ್ಯಕ್ರಮಗಳ ರಚನೆಯಲ್ಲಿ ಹೊಸತನವನ್ನು ಅಳವಡಿಸುವ ಕುರಿತು ಹಮ್ಮಿಕೊಳ್ಳಲಾಗಿದೆ. ಪ್ರೊ. ಸಿದ್ದು ಅಲಗೂರ ಮತ್ತು ಪ್ರೊ. ಎಸ್.ಹೆಚ್.ಅಯಾಚಿತ ಅವರು ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುವದರ ಜೊತೆಗೆ ಸಂಯೋಜನೆಯನ್ನು ಮಾಡಲಿದ್ದಾರೆ.

### Kannada Prabha 05-04-2016

#### ನಾಳೆ ಆರ್‌ಸಿಯುನಲ್ಲಿ ಕಾರ್ಯಾಗಾರ

**ಬೆಳಗಾವಿ:** ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ದಿಂದ ಪಠ್ಯಕ್ರಮ ವಿನ್ಯಾಸ ಮತ್ತು ಫಲಿತಾಂಶ ಆಧಾರಿತ ಶಿಕ್ಷಣ ಮಾದರಿ ವಿಷಯ ಕುರಿತ ಕಾರ್ಯಾಗಾರವು ಏ.6ರಂದು ಬೆಳಗ್ಗೆ 10.30ಕ್ಕೆ ವಿವಿಯ ಕುವೆಂಪು ಸಭಾಭವನದಲ್ಲಿ ನಡೆಯಲಿದೆ. ಆರ್‌ಸಿಯು ಕುಲಪತಿ ಪ್ರೊ.ಶಿವಾನಂದ ಹೊಸಮನಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಜಿಐಟಿ ಪ್ರಾಚಾರ್ಯ ಪ್ರೊ. ಎ. ಎಸ್. ದೇಶಪಾಂಡೆ, ಕುಲಸಚಿವ(ಆಡಳಿತ) ಪ್ರೊ. ಎಸ್. ಎಲ್. ಬೆಳಗಲಿ, ಕುಲಸಚಿವ (ಮೌಲ್ಯಮಾಪನ) ಪ್ರೊ. ರಂಗರಾಜ ವನದುರ್ಗ ಹಾಗೂ ಹಣಕಾಸು ಅಧಿಕಾರಿ ಪ್ರೊ. ಎಚ್. ವೈ. ಕಾಂಬಳೆ, ಸಂಪನ್ಮೂಲ ವ್ಯಕ್ತಿ ಡಾ. ಗೋಪಾಲಕೃಷ್ಣ ಜೋಶಿ ಆಗಮಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# Library & Information Centre

**Sakal 05-04-2016**



## चन्नम्मा विद्यापीठात उद्या कार्यशाळा

बेळगाव, ता. ४ : उच्च शिक्षण परिषद बंगळूर आणि राणी चन्नम्मा विद्यापीठाच्या वतीने बुधवारी (ता. ६) सकाळी १०.३० वाजता विद्यापीठाच्या कुवेंपू सभागृहात शिक्षणाच्या पद्धतीवर आधारित एकदिवसीय कार्यशाळा होणार आहे.

अध्यक्षस्थानी कुलगुरू प्रा. शिवानंद होसमनी असतील. प्रमुख पाहुणे म्हणून जीआयटीचे प्राचार्य प्रा. ए. एस. देशपांडे उपस्थित राहणार आहेत. भौतिकशास्त्र, संगणक विज्ञान, गणित अभ्यासक्रमात बदलांसंबंधी प्राध्यापकांना या वेळी मार्गदर्शन करण्यात येणार आहे.